**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಮುದ್ದೇಬಿಹಾಳ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 4314/2024**

ಚಾ.ಸಾ-4

ಫ್ರಾ.ಸಾ -2

| | | |
|---|---|---|
| ಸಾಕ್ಷಿಯ ಹೆಸರು | ಃ | ಶರಣಗೌಡ ಬಿರಾದಾರ |
| ತಂದೆಯ ಹೆಸರು | ಃ | ಬಸನಗೌಡ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಪಡೇಕನೂರ |

(ಸಾಕ್ಷಿಗೆ ದಿನಾಂಕ 15/05/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.)

ಮುಖ್ಯವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನನಗೆ, ಚಾಸಾ 1, 5 ರಿಂದ 16 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಮ್ಮ ಊರಿನವರು. ಆರೋಪಿತರು ಅಕ್ರಮಕೂಟ ಕಟ್ಟಿಕೊಂಡು ದೊಂಬಿ ಮಾಡುವ ಉದ್ದೇಶದಿಂದ ಬಂದು ನಮಗೆ ಅಕ್ರಮವಾಗಿ ತಡೆದಿಲ್ಲ, ಅವಾಚ್ಯವಾಗಿ ಬೈದಿಲ್ಲ, ಕೈಯಿಂದ, ಬಡಿಗೆ ಮತ್ತು ಕಲ್ಲಿನಿಂದ ಹೊಡಿಬಡಿ ಮಾಡಿಲ್ಲ, ಜೀವದ ಬೆದರಿಕೆ ಹಾಕಿಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಅನುಮತಿಸಲಾಯಿತು)

**ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ**

ದಿಃ 05/02/2021 ರಂದು ಕೊಣ್ಣೂರ ಗ್ರಾಮ ಪಂಚಾಯಿತಿಯ ಬಿಜೆಪಿ ಪಕ್ಷದ ಬೆಂಬಲಿತ ಅಭರ್ಥಿ ಅಧ್ಯಕ್ಷನಾಗಿದ್ದು, ಅವರ ಬೆಂಬಲಿಗರು ಪಟಾಕಿ ಹೊಡೆಯುವಾಗ ಚಾಸಾ 1 ಮತ್ತು ಆರೋಪಿತರ ಮಧ್ಯೆ ಬಾಯಿ ಮಾತಿನ ಜಗಳವಾಗಿತ್ತು ಎಂದರೆ ಸರಿಯಲ್ಲ. ನಂತರ ದಿನಾಂಕಃ10.02.2021 ರಂದು ಸಂ. 5.00 ಗಂಟೆ ಸುಮಾರಿಗೆ ನನಗೆ 2 ನೇ ಆರೋಪಿಯು ಅವಾಚ್ಯವಾಗಿ ಬೈದಿರುತ್ತಾನೆ ಎಂದರೆ ಸರಿಯಲ್ಲ. ನಂತರ ಅದೇ ದಿನ ರಾತ್ರಿ 08.00 ಗಂಟೆ ಸುಮಾರಿಗೆ ಚಾಸಾ 6 ರಿಂದ 13 ರವರು 1 ನೇ ಆರೋಪಿಯ ಮನೆಯ ಮುಂದೆ ಹೋಗುತ್ತಿದ್ದಾಗ ಎಲ್ಲ ಆರೋಪಿತರು ಸಂಗನಮತರಾಗಿ ಅಪರಾಧ ಮಾಡುವ ಏಕೋದ್ದೇಶವನ್ನು ಹೊಂದಿ, ಗುಂಪುಕಟ್ಟಿಕೊಂಡು ಕಬ್ಬಿಣದ ರಾಡು, ಕಲ್ಲು, ಬಡಿಗೆಗಳನ್ನು ತೆಗೆದುಕೊಂಡು ಬಂದು ಚಾಸಾಃ6 ರಿಂದ 9 ಮತ್ತು 11 ರಿಂದ 13 ರವರನ್ನು ಅಡ್ಡಗಟ್ಟಿ ನಿಲ್ಲಿಸಿ, 1 ನೇ ಆರೋಪಿ ಚಾಸಾ 1 ರವರಿಗೆ ಬಡಿಗೆಯಿಂದ ಹೊಡೆದನು ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ 9 ಮತ್ತು 10 ರವರಿಗೆ ಬಡಿಗೆಯಿಂದ ಹೊಡೆದನು ಎಂದರೆ ಸರಿಯಲ್ಲ. 3 ನೇ ಆರೋಪಿ ಚಾಸಾ 7 ಮತ್ತು 11 ರವರಿಗೆ ಬಡಿಗೆಯಿಂದ ಹೊಡೆದನು ಎಂದರೆ ಸರಿಯಲ್ಲ. 4 ನೇ ಆರೋಪಿ ಚಾಸಾ 8 ರವರಿಗೆ ಕಬ್ಬಿಣದ ರಾಡಿನಿಂದ ಹೊಡೆದನು ಎಂದರೆ ಸರಿಯಲ್ಲ. 5 ನೇ ಆರೋಪಿ ಚಾಸಾ 12 ರವರಿಗೆ ಬಡಿಗೆಯಿಂದ ಹೊಡೆದನು ಎಂದರೆ ಸರಿಯಲ್ಲ. 6 ನೇ ಆರೋಪಿ ಚಾಸಾ 13 ರವರಿಗೆ

ಕಲ್ಲಿನಿಂದ ಹೊಡೆದರು ಎಂದರೆ ಸರಿಯಲ್ಲ. ಎಲ್ಲ ಆರೋಪಿತರು ಸೇರಿ ನಮಗೆ ಅವಾಚ್ಯ ಶಬ್ದಗಳಿಂದ ಬೈದು, ಹೊಡಿಬಡಿ ಮಾಡಿ ಸಾದಾ ಮತ್ತು ಭಾರಿ ಗಾಯಪಡಿಸಿ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಅದರ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ವಿರುದ್ಧ ಆರೋಪಿತರು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಎರಡು ಪ್ರಕರಣಗಳನ್ನು ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಆದ್ದರಿಂದ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮರುಹೇಳಿಕೆ ಭಾಗವನ್ನು ನಿಪಿ 5 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಏನೂ ಇಲ್ಲ ಅಂತಾ ಹೇಳಿರುತ್ತಾರೆ.**

ಮರುವಿಚಾರಣೆ ಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾದಂ ಪ್ರ ವರ್ಗ, ಮುದ್ದೇಬಿಹಾಳ
ಮುದ್ದೇಬಿಹಾಳ.